ಕೆಲಸವಾಗಬೇಕೆಂದು ಕೇಳುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ನಾಗಪ್ಪ : ಮಾನ್ಯ ಸದಸ್ಯರು ಹೇಳಿದ ಹಾಗೆ ಆದಷ್ಟು ತೀವ್ರಗತಿಯಲ್ಲಿ ಆಯುಕ್ತರನ್ನು ನೇಮಕ ಮಾಡುತ್ತೇವೆ.

ಶ್ರೀ ಸಿ.ಚೆನ್ನಿಗಪ್ಪ: ನಗರಸಭೆಗಳಲ್ಲಿ ಖಾತೆ ಮಾಡುತ್ತೇವೆಂದು ಒಂದು ಚದರ ಅಡಿಗೆ ನೂರು ರೂಪಾಯಿಗಳನ್ನು ಖರ್ಚು ಮಾಡಿಸುವಂಥ ವ್ಯವಸ್ಥೆ ಮಾಡಿದ್ದಾರೆ. ಅಕ್ರಮವಾಗಿ ಒಂದು ಮನೆಗೆ ಎರಡು-ಮೂರು ಸಾವಿರ ರೂಪಾಯಿಗಳ ಡಿಮ್ಯಾಂಡ್ ಮಾಡುವಂಥ ಅನ್ಯಾಯ ನಡೆಯುತ್ತಿದೆ. ಮಾನ್ಯ ಮಂತ್ರಿಗಳು ದಯಮಾಡಿ ಇದರ ಬಗ್ಗೆ ಕೂಲಂಕಷವಾಗಿ ಪರಿಶೀಲನೆ ಮಾಡಿಸಿ, ನಾಗರೀಕರಿಗೆ ಆಗುತ್ತಿರುವ ತೊಂದರೆಯನ್ನು ತಪ್ಪಿಸಬೇಕೆಂದು ನಾನು ತಮ್ಮ ಮುಖಾಂತರ ವಿನಂತಿಯನ್ನು ಮಾಡುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ನಾಗಪ್ಪ: ನಮ್ಮ ಗಮನಕ್ಕೆ ಬಂದರೆ ಅದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ತುರುವೇಕೆರೆಯಲ್ಲಿ ಅಂಬೇಡ್ಕರ್ ಭವನ ನಿರ್ಮಾಣ

325(3096)

ಶ್ರೀ.ಲಕ್ಷ್ಮೀನಾರಾಯಣ ಎಂ.ಡಿ.(ತುರುವೇಕೆರೆ): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುರುವೇಕೆರೆ ಪಟ್ಟಣದಲ್ಲಿ ಅಂಬೇಡ್ಕರ್ ಭವನ ನಿರ್ಮಾಣ ಮಾಡಲು ಸರ್ಕಾರ ಯೋಚಿಸಿದೆಯೇ;

ಆ) ಯೋಚಿಸಿದ್ದರೆ ಇದನ್ನು ಎಷ್ಟು ದಿನಗಳಲ್ಲಿ ನಿರ್ಮಾಣ ಮಾಡಲಾಗುವುದು?

ಶ್ರೀ ಕಾಗೋಡು ತಿಮ್ಮಪ್ಪ(ಸಮಾಜ ಕಲ್ಯಾಣ ಸಚಿವರು):

ಅ ಮತ್ತು ಆ) ಸರ್ಕಾರಿ ಆದೇಶ ಸಂಖ್ಯೆ.ಸಕಇ 400 ಪಕವಿ 94 ದಿನಾಂಕ 29- 12- 95ರಲ್ಲಿ ತುಮಕೂರು ಜಿಲ್ಲೆಯ ತುರುವೇಕೆರೆಯಲ್ಲಿ ಒಂದು ಮಿನಿ ಅಂಬೇಡ್ಕರ್ ಭವನವನ್ನು ನಿರ್ಮಿಸಲು ಸರ್ಕಾರ ಮಂಜೂರಾತಿ ನೀಡಿದೆ. ಈ ಭವನದ ನಿರ್ಮಾಣಕ್ಕಾಗಿ ಈಗಾಗಲೇ 5.00 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ. ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗವು ಅಂದಾಜು ಮತ್ತು ನಕ್ಷೆಯನ್ನು ತಯಾರಿಸಿದ್ದು ಕಟ್ಟಡದ ಕಾಮಗಾರಿಯನ್ನು ಕೈಗೊಳ್ಳಲಾಗಿದೆ.

ಶ್ರೀ ಲಕ್ಷ್ಮೀನಾರಾಯಣ ಎಂ.ಡಿ: ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿರುವುದರಲ್ಲಿ ದಿನಾಂಕ:29-12-95ರಲ್ಲಿ ತುಮಕೂರು ಜಿಲ್ಲೆಯ ತುರುವೇಕೆರೆಯಲ್ಲಿ ಒಂದು ಮಿನಿ ಅಂಬೇಡ್ಕರ್ ಭವನವನ್ನು ನಿರ್ಮಿಸಲು ಸರ್ಕಾರ ಮಂಜೂರಾತಿ ನೀಡಿದೆ ಎಂಬ ಮಾತನ್ನು ಉಲ್ಲೇಖ ಮಾಡಿದ್ದಾರೆ. ಆದರೆ ನನಗೆ ತಿಳಿದಿರುವ ಹಾಗೆ ಏಪ್ರಿಲ್-14 ರಂದು ರಾಜ್ಯ ಮತ್ತು ರಾಷ್ಟ್ರದಲ್ಲಿ ಅಂಬೇಡ್ಕರರವರ ಬಗ್ಗೆ ಸಾಕಷ್ಟು ಮಾತನಾಡುತ್ತಿರುತ್ತೇವೆ. ಈಗಾಗಲೇ ನನ್ನ ತಾಲ್ಲೂಕಿನಲ್ಲಿ 1994, 1997-1998ರಲ್ಲಿ 3 ಬಾರಿ ಶಂಕುಸ್ಥಾಪನೆಯಾದ ಕಲ್ಲುಗಳನ್ನು ಮಾನ್ಯ ಮಂತ್ರಿಗಳು ಆಯಾಯ ಸರ್ಕಾರ ಅಧಿಕಾರದಲ್ಲಿದ್ದಾಗ ಹಾಕಿದ್ದಾರೆ. ಆದರೆ ಇದುವರೆಗೂ ಕೂಡ ಆ ಜಾಗವು ನಮ್ಮ ಸಮಾಜಕಲ್ಯಾಣ ಇಲಾಖೆಗೆ ಪಟ್ಟಣ ಪಂಚಾಯಿತಿಯಿಂದ ಬಂದಿಲ್ಲ. ನಾವು ಇದರ ಬಗ್ಗೆ ಸಮಾಜಕಲ್ಯಾಣ ಇಲಾಖೆಯವರ ಜೊತೆ ಪ್ರಸ್ತಾಪ ಮಾಡಿದಾಗ 14ನೇ ತಾರೀಖು ಅಂಬೇಡ್ಕರ್ ಜಯಂತಿಯ ದಿವಸದಂದೂ ಕೂಡ ಪಟ್ಟಣ ಪಂಚಾಯಿತಿಯ ವತಿಯಿಂದ ಸಮಾಜಕಲ್ಯಾಣ ಇಲಾಖೆಗೆ ಆ ಜಾಗವು ಇನ್ನು ಮಂಜೂರಾತಿಯಾಗಿರುವುದಿಲ್ಲ. ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳು ನಮ್ಮಲ್ಲಿ ಹಣವಿಲ್ಲವೆಂದು ಸಹ ತಿಳಿಸಿದ್ದಾರೆ. ಅದಕ್ಕೋಸ್ಕರವಾಗಿ ದಯಮಾಡಿ ಮಾನ್ಯ ಮಂತ್ರಿಗಳು ಕೊಟ್ಟಂತಹ ಉತ್ತರವು ನನಗೆ ಸಮಂಜಸವಾಗಿಲ್ಲ, ತಕ್ಷಣ ಆ ಇಲಾಖೆಯ ಅಧಿಕಾರಿಗಳನ್ನು ನೀವು ಕರೆಸಬೇಕು. ಏಕೆಂದರೆ ಅವರು 5 ಲಕ್ಷ ರೂಪಾಯಿಗಳ ಅನುದಾನ ಬಿಡುಗಡೆಯಾಗಿದೆ ಎಂಬ ಮಾತನ್ನು ಹೇಳಿದ್ದಾರೆ. ಆದರೆ, ಅಲ್ಲಿ ಯಾವುದೇ ಅಕೌಂಟಿನಲ್ಲಿ 5 ಲಕ್ಷ ರೂಪಾಯಿಗಳು ಇಲ್ಲ, ದಯಮಾಡಿ ಮಾನ್ಯ ಮಂತ್ರಿಗಳು ಇದರ ಬಗ್ಗೆ ಸಮಂಜಸವಾದ ಉತ್ತರವನ್ನು ಹೇಳಬೇಕೆಂದು ನಾನು ಕೇಳುತ್ತಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಅಧ್ಯಕ್ಷರೆ, ಅಲ್ಲಿ ಕಟ್ಟಡಕ್ಕೆ ಶಿಲಾನ್ಯಾಸ ಮಾಡಿರತಕ್ಕಂತಹ ಮಾಹಿತಿ ನನ್ನ ಹತ್ತಿರವಿಲ್ಲ. ನಾನು ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಅವರ ಪ್ರದೇಶದಿಂದ ಆ ಜಾಗವನ್ನು ನಮ್ಮ ಇಲಾಖೆಗೆ ಬೇಗ ವಹಿಸಿಕೊಟ್ಟರೆ ನಮ್ಮಲ್ಲಿ ಹಣವಿರುವುದರಿಂದ ಇನ್ನು 6 ತಿಂಗಳಲ್ಲಿ ಕಟ್ಟಡವನ್ನು ಕಟ್ಟಿಸುವಂತಹ ಕೆಲಸವನ್ನು ಮಾಡುತ್ತೇನೆ. ಇದರಲ್ಲಿ ತಮ್ಮ ಜವಾಬ್ದಾರಿಯೂ ಇದೆ, ತಾವು ಯಾವ ಪ್ರಕಾರವಾಗಿ ಹೇಳುತ್ತೀರೋ ಆ ಪ್ರಕಾರವಾಗಿ ಕಟ್ಟಡವನ್ನು ಕಟ್ಟುತ್ತೇವೆ.

ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ: ಮಾನ್ಯ ಸಚಿವರು ಹಣ ಇದೆಯೆಂಬ ಮಾತನ್ನು ಹೇಳುತ್ತಿದ್ದಾರೆ, ಸಮಾಜಕಲ್ಯಾಣ ಇಲಾಖೆಯ ವತಿಯಿಂದ 14ನೇ ತಾರೀಖು ನಡೆದ ಅಂಬೇಡ್ಕರ್ ಜಯಂತಿಯ ದಿವಸ ಮಾಹಿತಿಯನ್ನು ತರಿಸಿಕೊಂಡಾಗ ಅಲ್ಲಿ ಯಾವುದೇ ಹಣವಿರಲಿಲ್ಲ. ಅದಕ್ಕೋಸ್ಕರವಾಗಿ ನಾನು ನಿಮ್ಮಲ್ಲಿ ನಿವೇದನೆ ಮಾಡುತ್ತಿರುವುದು.

ಅಧ್ಯಕ್ಷರು: ಮಾನ್ಯ ಮಂತ್ರಿಗಳು ಹಣವಿದೆ ಎಂದು ಹೇಳಿದ ಮೇಲೆ, ತಾವು ಏಕೆ ಹಣವಿಲ್ಲವೆಂದು ಹೇಳುತ್ತೀರಿ? ಮಂತ್ರಿಗಳು ಇದರ ಬಗ್ಗೆ ಹೇಳುತ್ತಾರೆ.

ಶ್ರೀ ಎಂ.ಡಿ.ಲಕ್ಷ್ಮಿನಾರಾಯಣ: ಸನ್ಮಾನ್ಯ ಅಧ್ಯಕ್ಷರೆ, ಹಣ ಇಲಾಖೆಯಲ್ಲಿಲ್ಲ. ಮಾನ್ಯ ಮಂತ್ರಿಗಳು ಭರವಸೆಯನ್ನು ಕೊಟ್ಟರೆ ಇದು ಆಗಬಹುದು.

ಶ್ರೀ ಕಾಗೋಡು ತಿಮ್ಮಪ್ಪ: ಆ ಹಣ ಇಲಾಖೆಯಲ್ಲಿರುವುದಿಲ್ಲ. ಅದನ್ನು ಜಿಲ್ಲಾ ಪಂಚಾಯಿತಿಗೆ ನಾವು ಜಮಾ ಮಾಡಿರುತ್ತೇವೆ. ನೀವು ನಮಗೆ ಜಾಗವನ್ನು ವಹಿಸಿಕೊಡಿ.

ಶ್ರೀ ಎಂ.ಡಿ.ಲಕ್ಷ್ಮಿನಾರಾಯಣ: ನೀವು 6 ತಿಂಗಳಲ್ಲಿ ಆ ಕೆಲಸವನ್ನು ಮಾಡಿಕೊಡುತ್ತೀರಾ? ನಾನು 30 ದಿವಸದೊಳಗಾಗಿ ಆ ಜಾಗವನ್ನು ನಿಮ್ಮ ಇಲಾಖೆಗೆ ಕೊಡಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ: ನೀವು ಹೇಳಿದಂತಹ ಒಬ್ಬ ಗುತ್ತಿಗೆದಾರರ ಹತ್ತಿರ ಜಿಲ್ಲಾ ಪಂಚಾಯಿತಿ ವತಿಯಿಂದ ಕೆಲಸವನ್ನು ಮಾಡಿಸುತ್ತೇವೆ. ನೀವು ಜಾಗವನ್ನು ವಹಿಸಿಕೊಟ್ಟ 6 ತಿಂಗಳಲ್ಲೇ ಕಟ್ಟಡದ ಕೆಲಸವನ್ನು ಪ್ರಾರಂಭ ಮಾಡುತ್ತೇವೆ.

ಶ್ರೀ ಮಹಂತೇಶ ಶಿವಾನಂದ ಕೌಜಲಗಿ: ಮಾನ್ಯ ಅಧ್ಯಕ್ಷರೆ, ತಾಲ್ಲೂಕು ಮಟ್ಟದಲ್ಲಿ ಸರ್ಕಾರಿ ಜಾಗದಲ್ಲಿ ಅಂಬೇಡ್ಕರ್ ಭವನವನ್ನು ನಿರ್ಮಾಣ ಮಾಡಬೇಕೆಂದು ಹೇಳಿ ಅನೇಕ ಕಡೆ ಮಂಜೂರಾತಿಯನ್ನು ಕೊಟ್ಟಿದೆ. ಆದರೆ ಇದುವರೆಗೂ ಎಲ್ಲೂ ಹಣ ಬಿಡುಗಡೆಯಾಗಿಲ್ಲ. ಅದಕ್ಕೆ ಆದಷ್ಟು ಬೇಗನೆ ಹಣವನ್ನು ಬಿಡುಗಡೆ ಮಾಡಬೇಕೆಂದು ನಾನು ಕೇಳುತ್ತಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ: ನಾವು ಕೆಲವು ಕಡೆ ಹಣವನ್ನು ಬಿಡುಗಡೆ ಮಾಡಿದ್ದೇವೆ. ಕೆಲವು ಕಡೆ ಏನಾಗಿದೆಯೆಂದರೆ, ನಾವು ಹಣವನ್ನು ಬಿಡುಗಡೆ ಮಾಡಿದರೂ ಕೂಡ ನಿವೇಶನವು ಸಿಗದೆ ಇರುವ ಕಾರಣಕ್ಕಾಗಿ ಅದು ಯುಟಿಲೈಸ್ ಆಗಲಿಲ್ಲ. ಹಿಂದೆ ಎಲ್ಲೆಲ್ಲಿ ಮಂಜೂರಾಗಿದೆ ಅಂತಹ ಕಡೆ ನಿವೇಶನಗಳು ಸಿಕ್ಕಿದರೆ ಅವುಗಳನ್ನು ಕಟ್ಟಿಸುವುದಕ್ಕೆ ಅಗತ್ಯವಾದ ಹಣವನ್ನು ತಕ್ಷಣ ಬಿಡುಗಡೆ ಮಾಡುತ್ತೇವೆ.

ಶ್ರೀ ವಿಶ್ವೇಶ್ವರ ಹೆಗಡೆ (ಕಾಗೇರಿ): ಅಂಬೇಡ್ಕರ ಭವನಕ್ಕೆ ಅಡಿಗಲ್ಲನ್ನು ಹಾಕಿ 4 ವರ್ಷಗಳಾಯಿತು, ಅಂಬೇಡ್ಕರ್ ಭವನದ ಕಟ್ಟಡ ಕಟ್ಟಲು ಅಲ್ಲಿ ದುಡ್ಡು ಇಲ್ಲ, ಅಂಕೋಲದಲ್ಲಿ ಅಂಬೇಡ್ಕರ್ ಭವನ ಇನ್ನು ನಿರ್ಮಾಣವಾಗಿಲ್ಲ. ಅಲ್ಲಿ ಇನ್ನು ಏನು ಕೆಲಸವಾಗಿಲ್ಲ. ಇದು ಅಂಬೇಡ್ಕರ ಭವನದ ಕಥೆಯಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಸದಸ್ಯರಾದ ಹೆಗಡೆಯವರು ಅಂತಹ ಕಥೆಯನ್ನು ಸಾವಿರ ಹೇಳಬಹುದು, ನನಗೆ ಈ ಬಗ್ಗೆ ಕಥೆ ಗೊತ್ತಿದೆ; ಹಿಂದೆ ಇದಕ್ಕೆ ಮಂಜೂರಾಗಿದೆ. ಹೀಗೆ ಮಂಜೂರಾಗಿರುವಂತಹ ಅನೇಕ ಕಡೆಗಳಲ್ಲಿ ನಿವೇಶನ ಇಲ್ಲದೆ ಕೆಲಸ ಪ್ರಾರಂಭವಾಗಿರುವುದಿಲ್ಲ. ನಿವೇಶನವನ್ನು ಅವರು ಒದಗಿಸಿದ್ದರೆ ಭವನ ಕಟ್ಟದೆ

ಇರುವುದಕ್ಕೆ ಏನಾದರೂ ಕಾರಣವಿರಬಹುದು. ಅಲ್ಲಿ ಕಟ್ಟದೆ ಇದ್ದರೆ ನಾನು ಇವತ್ತೇ ಅದನ್ನು ಪರಿಶೀಲಿಸಿ ಅಲ್ಲಿಗೆ ಹಣವಿಲ್ಲದೆ ಇದ್ದರೆ ಬಿಡುಗಡೆ ಮಾಡಿ ಕಟ್ಟುವುದಕ್ಕೆ ವ್ಯವಸ್ಥೆ ಮಾಡುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಇದಕ್ಕೆ ಇಲಾಖೆಯ ನಿರ್ಲಕ್ಷ್ಯವೇ ಹೊರತು ಇನ್ನೇನೂ ಕಾರಣವಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ: ಇದು ಇಲಾಖೆಯ ನಿರ್ಲಕ್ಷ್ಯವಲ್ಲ, ಈ ಕೆಲಸವನ್ನು ಜಿಲ್ಲಾ ಪಂಚಾಯಿತಿಯಿಂದ ಮಾಡಿಸಬಹುದಲ್ಲವೇ. ನೀವು ಜಿಲ್ಲಾ ಪಂಚಾಯಿತಿಯಲ್ಲಿ ಕುಳಿತಿರುತ್ತೀರಾ, ಸಮಯವನ್ನು ಉಪಯೋಗಿಸಿಕೊಂಡು ಈ ಕೆಲಸವನ್ನು ನೀವು ಮಾಡಿಸಿಕೊಳ್ಳಿ.

ಭಿಕ್ಷಾಟನೆಯನ್ನು ತಡೆಗಟ್ಟುವುದು

327(2751)

ಶ್ರೀ ಶಿವಪ್ಪ.ಬಿ.ಬಿ.(ಸಕಲೇಶಪುರ): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಗರದಲ್ಲಿ ಹಾಗೂ ಪಟ್ಟಣ ಪ್ರದೇಶದಲ್ಲಿ ಹೆಚ್ಚಾಗಿ ಬೆಂಗಳೂರು ನಗರದಲ್ಲಿ ಜನರು ಭಿಕ್ಷಾಟನೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಬಾಡಿಗೆದಾರರು ನಿಗಧಿಪಡಿಸಿದಂತೆ, ಒಂದು ದಿನಕ್ಕೆ ಹಣಕೊಟ್ಟು ಚಿಕ್ಕ ಚಿಕ್ಕ ಮಕ್ಕಳ ಕೈಯಲ್ಲಿ ಭಿಕ್ಷಾಟನೆ ಮಾಡಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಸುಳೆಗಳನ್ನು ಸೊಂಟಕ್ಕೆ ಕಟ್ಟಿಕೊಂಡು ಹೆಣ್ಣು ಮಕ್ಕಳುಗಳು ಭಿಕ್ಷೆ ಬೇಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ದೇವರ ಫೋಟೊಗಳ ಪ್ರತಿಗಳನ್ನು ಹಿಡಿದುಕೊಂಡು ಹಣ ಬೇಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಕುಷ್ಟರೋಗಿಗಳು ಎಂಬುದಾಗಿ ಮೇಲೆ ಕಟ್ಟುವ ಪಟ್ಟಿಯನ್ನು ಕಟ್ಟಿಕೊಂಡು ಹಣ ಬೇಡುವವರನ್ನು ಸರ್ಕಾರ ಗಮನಿಸಿದೆಯೇ?

ಊ) ಮೇಲ್ಕಂಡ ಭಿಕ್ಷಾಟನೆಯನ್ನು ತಡೆಗಟ್ಟಲು ಸರ್ಕಾರವು ಕೈಗೊಂಡ ಕ್ರಮಗಳೇನು?